

## ಯಾವುದಕ್ಕೆಲ್ಲ ನಿಷೇಧ?

‘ಪ್ಲಾಸ್ಟಿಕ್‌ತ್ಯಾಜ್ಯ ನಿರ್ವಹಣಾ ತಿದ್ದುಪಡಿ ನಿಯಮ–2021’ರ ಪ್ರಕಾರ, ಏಕೋಪಯೋಗಿ ಪ್ಲಾಸ್ಟಿಕ್ ಅನ್ನು ತಯಾರಿಸುವುದು, ಆಮದು ಮಾಡಿಕೊಳ್ಳುವುದು, ಸಂಗ್ರಹಿಸಿ ಇಟ್ಟುಕೊಳ್ಳುವುದು, ಮಾರಾಟ ಮಾಡುವುದು ಮತ್ತು ಉಪಯೋಗಿಸುವುದು ನಿಷಿದ್ಧ.

ಪ್ಲಾಸ್ಟಿಕ್‌ನಿಂದ ತಯಾರಿಸಿದ ಗುಗ್ಗೆ ಕಡ್ಡಿ, ಐಸ್ ಕ್ರೀಂ ಕಡ್ಡಿ, ಕ್ಯಾಂಡಿಗಳು, ಬಲೂನುಗಳು, ಧ್ವಜ, ಅಲಂಕಾರಕ್ಕಾಗಿ ಬಳಸುವ ಥರ್ಮೋಕೋಲ್, ಪ್ಲಾಸ್ಟಿಕ್ ಪ್ಲೇಟುಗಳು, ಲೋಟ, ಫೋರ್ಕ್, ಚಮಚ, ಕೇಕ್ ತುಂಡರಿಸುವ ಪ್ಲಾಸ್ಟಿಕ್ ಚಾಕು, ಸ್ಟ್ರಾ ಅಂತಹವು ಸಹ ನಿಷೇಧದ ಪಟ್ಟಿಯಲ್ಲಿವೆ.

ಬೇಕರಿಯಲ್ಲಿ ಪ್ಯಾಕಿಂಗ್ ರಟ್ಟಿನ ಮೇಲೆ, ಆಮಂತ್ರಣ ಪತ್ರ, ಸಿಗರೇಟು ಪ್ಯಾಕ್ ಮೇಲೆ ಬಳಸುವ ತೆಳು ಪ್ಲಾಸ್ಟಿಕ್ ಹೊದಿಕೆ, ಡೈನಿಂಗ್ ಟೇಬಲ್ ಮೇಲೆ ಬಳಸುವ ಪ್ಲಾಸ್ಟಿಕ್ ಶೀಟ್‌ಗಳನ್ನೂ ಬಳಸುವಂತಿಲ್ಲ.

ಪರಿಸರಸ್ನೇಹಿ ಹೆಸರಿನಲ್ಲಿ ಮಾರುಕಟ್ಟೆಗೆ ಬರಲಿರುವ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್, ಜನರಿಗೆ, ಪರಿಸರಕ್ಕೆ ಸರ್ಕಾರಕ್ಕೆ ಬಿಸಿ ತುಪ್ಪವೂ ಆಗಬಹುದು.

ಜಲಮಾಲಿನ್ಯ ಹೆಚ್ಚಬಹುದು, ಮಣ್ಣಿನ ಆರೋಗ್ಯವೂ ಹಾಳಾಗಬಹುದು ಎಂಬ ಆತಂಕ ವಿಜ್ಞಾನಿಗಳದ್ದು.

### ಆರ್ಥಿಕ ಸವಾಲುಗಳು

ಸದ್ಯ, ಬಳಕೆಯಲ್ಲಿರುವ ಪ್ಲಾಸ್ಟಿಕ್‌ಗಳ ಉತ್ಪಾದನಾ ವೆಚ್ಚಕ್ಕೆ ಹೋಲಿಸಿದರೆ, ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್‌ಗಳ ಉತ್ಪಾದನಾ ವೆಚ್ಚ ದುಪ್ಪಟ್ಟು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾದ ನಂತರವಂತೂ, ಸಾಮಾನ್ಯ ಪ್ಲಾಸ್ಟಿಕ್‌ಗಳ ಉತ್ಪಾದನಾ ವೆಚ್ಚ ಇನ್ನೂ ಕಡಿಮೆಯಾಗಿದೆ.

ತಾಂತ್ರಿಕವಾಗಿ ಹೆಚ್ಚು ಸಂಶೋಧನೆ ನಡೆಯದಿರುವುದು ಮತ್ತು ತಾಂತ್ರಿಕ ಜ್ಞಾನವೂ ಇಲ್ಲದಿರುವುದು ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್‌ಗಳ ಉತ್ಪಾದನಾ ವೆಚ್ಚ ಹೆಚ್ಚಲು ಕಾರಣವಾಗಿದೆ.

ಪೆಟ್ರೊಕೆಮಿಕಲ್ ಮೂಲ ಪದಾರ್ಥಗಳಿಗೆ ಹೋಲಿಸಿದರೆ, ಕೃಷಿ ಮೂಲ ಪದಾರ್ಥಗಳ ವೆಚ್ಚ 2ರಿಂದ 5ಪಟ್ಟು ಹೆಚ್ಚು. ಈ ಕಾರಣದಿಂದ, ಉತ್ಪನ್ನದ ಅಂತಿಮ ಮೌಲ್ಯವು ಸಹಜವಾಗಿಯೇ ಹೆಚ್ಚಿರುತ್ತದೆ.

### ಸಾಮಾಜಿಕ ಸವಾಲುಗಳು

ಕೃಷಿ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳಿಗೆಬಳಸುವಕಾರ್ಯಪ್ರಾರಂಭವಾದರೆ, ಆಹಾರ ಪೂರೈಕೆ ವಲಯದಲ್ಲಿಯೂ ಪೈಪೋಟಿ ಆರಂಭವಾಗಬಹುದು. ಇದು ಪರೋಕ್ಷವಾಗಿ ಆಹಾರ ಉತ್ಪನ್ನಗಳ ಬೆಲೆ ಏರಿಕೆಗೂ ಕಾರಣವಾಗಬಹುದು. ಆಗ, ಹೆಚ್ಚು ತೊಂದರೆಗೊಳಗಾಗುವವರು ಬಡ ಮತ್ತು ಮಧ್ಯಮ ವರ್ಗದ ಜನ.

ಇನ್ನೊಂದೆಡೆ, ಆ ಕ್ಷಣಕ್ಕೆ ಹೆಚ್ಚು ಆದಾಯ ಬರುತ್ತದೆ ಎಂದು ಸಣ್ಣ ರೈತರು, ಕೃಷಿ ಉತ್ಪನ್ನಗಳನ್ನು ಪ್ಲಾಸ್ಟಿಕ್ ತಯಾರಿಕಾ ಘಟಕಗಳಿಗೆ ಮಾರಿಕೊಳ್ಳಬಹುದು. ಆದರೆ, ಆದಷ್ಟು ವೆಚ್ಚ ತಗ್ಗಿಸಿಕೊಳ್ಳಲು ಯೋಚಿಸುವ ಕೈಗಾರಿಕಾ ಕಂಪನಿಗಳು, ಕೃಷಿ ಕ್ಷೇತ್ರದಲ್ಲಿ ಕೈಗಾರಿಕೆಗಳ ಪ್ರವೇಶದಿಂದಾಗುವ ಕಾರ್ಮಿಕ ಹಕ್ಕುಗಳ ಉಲ್ಲಂಘನೆ, ಮಣ್ಣಿನ ಮಾಲಿನ್ಯ ಮತ್ತು ಸಾಮಾಜಿಕ ಅಸಮತೋಲನದಂತಹ ನಕಾರಾತ್ಮಕ ಪರಿಣಾಮಗಳನ್ನು ನಿರ್ಲಕ್ಷಿಸುವ ಅಪಾಯವೂ ಇದೆ.

ಪರಿಸರಸ್ನೇಹಿ ಹೆಸರಿನಲ್ಲಿ ಮಾರುಕಟ್ಟೆಗೆ ಬರಲಿರುವ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್, ಜನರಿಗೆ, ಪರಿಸರಕ್ಕೆ ಸರ್ಕಾರಕ್ಕೆ ಬಿಸಿ ತುಪ್ಪವೂ ಆಗಬಹುದು. ಆದರೆ, ನೆಲ, ಗಾಳಿ ಅಲ್ಲದೆ ಸಾಗರ ಪ್ರದೇಶಗಳನ್ನು ಆಹುತಿ ತೆಗೆದುಕೊಳ್ಳುತ್ತಿರುವ, ಸದ್ಯ ಹೆಚ್ಚು ಬಳಕೆಯಲ್ಲಿರುವ ಪ್ಲಾಸ್ಟಿಕ್‌ಗಿಂತ, ಜೈವಿಕ ವಿಘಟನೆ ಹೊಂದುವ ಈ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್, ಸೋತವರಿಗೆ ಸಮಾಧಾನಕರ ಬಹುಮಾನ ಸಿಕ್ಕಂತೆ ಎಂಬುದಂತೂ ಸ್ಪಷ್ಟ.

ಪ್ಲಾಸ್ಟಿಕ್ ನಿಷೇಧ ಎನ್ನುವುದು ಬಹಳಷ್ಟು ಸಂದರ್ಭಗಳಲ್ಲಿ ಸಾಮಾನ್ಯಜನರಿಗೆ ಸಂಬಂಧಿಸಿದ ಸಂಗತಿ ಎಂದು ಬಿಂಬಿಸಲಾಗುತ್ತದೆ. ಆದರೆ, ಈ ನಿಷೇಧ ಮೊದಲು ಜಾರಿಗೊಳ್ಳಬೇಕಾದುದು ಜಾಗತಿಕ ಹಂತದಲ್ಲಿ, ಬಹುರಾಷ್ಟ್ರೀಯ ಕಂಪನಿಗಳ ಪಡಸಾಲೆಗಳಲ್ಲಿ ಹಾಗೂ ಚಿಂತನಮಂಥನಗಳಲ್ಲಿ. ಪ್ಲಾಸ್ಟಿಕ್ ಉತ್ಪನ್ನಗಳನ್ನು ಮನೆಮನೆಯ ಭಾಗವಾಗಿಸಿದ್ದೇ ಈ ವ್ಯಾಪಾರಿ ಕಂಪನಿಗಳು. ಈಗ ಪ್ಲಾಸ್ಟಿಕ್ ಹೆಕ್ಕಬೇಕಾದ ಹೊಣೆಗಾರಿಕೆಯೂ ಅವುಗಳದೇ ಆಗಿದೆ.

ಪ್ಲಾಸ್ಟಿಕ್ ನಿಷೇಧ ಅನಿವಾರ್ಯ. ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಕೆ ಅನೈತಿಕ ಕೂಡ.

